# ಅಜ್ಜನ ಪರಿಸರ ಕಾಳಜಿ

ಈಚೆಗೆ ಎಲ್ಲೆಡೆ ಗಣೇಶ ಚತುರ್ಥಿಯು ಅದ್ದೂರಿಯಾಗಿ ನಡೆದಿದೆ. ಸಂಭ್ರಮಾಚರಣೆಯ ನಡುವೆ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ತಯಾರಾದ ಗಣೇಶನ ಮೂರ್ತಿಗಳನ್ನು ಕೆರೆಕುಂಟೆ, ಬಾವಿಗಳಲ್ಲಿ ವಿಸರ್ಜಿಸಿ ನೀರನ್ನೂ ಮಲಿನಗೊಳಿಸಲಾಗಿದೆ. ಇದಕ್ಕೆ ತದ್ವಿರುದ್ಧ ಎಂಬಂತೆ ರಾಯಚೂರು ನಗರದ ಆಟೊ ಮೊಬೈಲ್ಸ್ ಸ್ಪೇರ್ ಪಾರ್ಟ್ಸ್ ವ್ಯಾಪಾರಿ ಆನಂದ ಕುಲಕರ್ಣಿ ಅವರು ತಮ್ಮ ಇಳಿವಯಸ್ಸಿನಲ್ಲಿ ಪರಿಸರ ಕಾಳಜಿಗೆ ತುಡಿಯುತ್ತಿದ್ದಾರೆ.

ಇವರು ಕಳೆದ ಮೂವತ್ತು ವರ್ಷಗಳಿಂದ ತಾವೇ ಮಣ್ಣಿನ ಗಣಪ ಮಾಡಿ ಉಚಿತವಾಗಿ ಭಕ್ತರಿಗೆ ಹಂಚುತ್ತಿದ್ದಾರೆ. ಹಿರಿಯರಾದ ಇವರು ಈ ಬಾರಿಯೂ ಮಣ್ಣಿನಿಂದ ಮಾಡಿದ ಐವತ್ತಕ್ಕೂ ಹೆಚ್ಚು ಗಣೇಶ ಮೂರ್ತಿಗಳನ್ನು ತಯಾರಿಸಿ ತಮ್ಮ ಬಂಧು, ಬಳಗ, ಸ್ನೇಹಿತರಿಗೆ, ಭಕ್ತ ಗಣಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಆನಂದ ಅಜ್ಜ ಹಂಚುವ ಗಣಪನಿಗೆ ನೈಸರ್ಗಿಕ ಬಣ್ಣಗಳನ್ನು ತಾವೇ ಬಳಿದು, ಚೆಂದವಾಗಿಸುತ್ತಾರೆ. 75ರ ಇಳಿವಯಸ್ಸಿನ ಈ ಹಿರಿಯ ಜೀವಕ್ಕೆ ತನ್ನಿಂದ ಕೊಂಚವಾದರೂ ಮಾಲಿನ್ಯ ಕಡಿಮೆಯಾಗಲಿ ಎಂಬ ಆಶಯ.

—ಈರಣ್ಣ ಬೆಂಗಾಲಿ, ರಾಯಚೂರು






# ಸೌಹಾರ್ದ ಸಾರುವ ಆಧಾರ್ ಗಣಪ

ಕೋಲಾರದಲ್ಲಿ ಈ ಬಾರಿ ಆಧಾರ್ ಗಣಪ ಸೌಹಾರ್ದಕ್ಕೆ ಟೊಂಕಕಟ್ಟಿದ್ದಾನೆ. ಹೌದು, ಕೋಲಾರದ ಅಂತರಗಂಗೆ ಮುಖ್ಯರಸ್ತೆಯ ಕೀಲುಕೋಟೆಯ ಮಾರಮ್ಮ ದೇಗುಲ ಹಿಂಭಾಗದ ಮುಖ್ಯರಸ್ತೆ ಬದಿ ಆಧಾರ್ ಗಣಪ ಪ್ರತಿಷ್ಠಾಪನೆಗೊಂಡಿದ್ದಾನೆ. ರಸ್ತೆಬದಿ ನೆಲೆಗೊಂಡ ಈ ಗಣಪ, ‘ಎಲ್ಲರಿಗೂ ಆಧಾರ್ ಸಂಖ್ಯೆ ಬೇಕು, ನಾವೆಲ್ಲರೂ ಒಂದೇ ನಮಗೇಕೆ ಬೇಕು ಜಾತಿ ಭೇದ’ ಎಂಬ ಸಂದೇಶವನ್ನು ಈ ಗಣಪ ಸಾರುತ್ತಿದ್ದಾನೆ. ರಸ್ತೆಯಲ್ಲಿ ಸಾಗುವ ಜನರಿಗೆ ಇದು ವಿಭಿನ್ನ ಅನುಭವ ಕಟ್ಟಿಕೊಡುವುದರ ಜೊತೆಗೆ ಸಹಬಾಳ್ವೆಯ ಸಂದೇಶ ನೀಡುವಂತಿದೆ.

—ಮನೋಜ್ ಆರ್., ಕೋಲಾರ

# ಮೌಢ್ಯದ ಮಡಿಕೆ ಮತ್ತು ಜೇನು ಕುಟುಂಬ

ತೇಜಸ್ವಿಯವರ ಕಾದಂಬರಿಯೊಂದರಲ್ಲಿ ಕಾಡಿನಲ್ಲಿ ಜೇನುನೊಣಗಳು ಮಡಿಕೆಯೊಳಗೆ ಗೂಡಿಟ್ಟಿರುವ ಮತ್ತು ಅದನ್ನು ಕಂಡು ಅವರ ಮುದ್ದಿನ ನಾಯಿ ‘ಕಿವಿ’ ಬೊಗಳುತ್ತಾ ಜೇನುನೊಣಗಳನ್ನು ಕೆರಳಿಸುವ ಪ್ರಸಂಗವಿದೆ. ಹೀಗೆ ಮಡಿಕೆಯೊಳಗೆ ಜೇನುನೊಣಗಳು ಬಂದು ಸಂಸಾರ ಹೂಡುತ್ತವೆಯೆಂದಾದರೆ ನಾವೇಕೆ ಇದನ್ನು ಪ್ರಯತ್ನಿಸಬಾರದೆಂದು ಆಗಾಗ ಅನ್ನಿಸುತ್ತಿತ್ತು. ನಮ್ಮೂರಿಗೆ ಮಳೆಗಾಲದಲ್ಲಿ ಬರುವ ತುಂಗಭದ್ರಾ ನದಿಯ ಹಿನ್ನೀರು ತನ್ನೊಟ್ಟಿಗೆ ಚಿತ್ರ ವಿಚಿತ್ರ ವಸ್ತುಗಳನ್ನು ಹೊತ್ತು ತಂದು ದಡಕ್ಕೆಸೆಯುತ್ತದೆ. ಹೀಗೆ ಎಸೆದ ವಸ್ತುಗಳಲ್ಲಿ ಯಾರೋ ಕೈಲಾಸವಾಸಿಗಳ ಅಸ್ಥಿ ತುಂಬಿದ ಮಡಿಕೆಯೊಂದು ಅನಾಥವಾಗಿ ಬಿದ್ದಿತ್ತು. ಸುಡುಗಾಡಿಗೆ ಸಂಬಂಧಿಸಿದ ಇಂತಹ ಮಡಿಕೆಗಳನ್ನು ಕಂಡರೆ ನಮ್ಮಲ್ಲಿನವರು ವಿಚಿತ್ರವಾಗಿ ವರ್ತಿಸುತ್ತಾ ಮಡಿಕೆಯನ್ನು ಒಡೆದುಹಾಕಿ ಅದರ ಚೂಪಾದ ಚೂರುಗಳು ಅವರಿವರ ಪಾದಗಳಿಗೆ ಕೊರೆಯಲು ಅನುವು ಮಾಡಿಕೊಡುತ್ತಾರೆ. ಶವ ಶಿವನಿಗೆ ಸಮಾನ ಎಂಬ ಮಾತು ಬಹುಶಃ ಇವರಿಗೆ ನಾಟಿಲ್ಲವೇನೋ.

ಅಂದಹಾಗೆ ನನ್ನ ಪ್ರಯೋಗಕ್ಕೆ ಒಂದು ಮುಖ್ಯವಾದ ಪುಕ್ಕಟೆ ವಸ್ತು ಸಿಕ್ಕಿತು. ತಡಮಾಡದೆ ಅದನ್ನು ಎತ್ತೊಯ್ದು ತೆಳುವಾದ ದಾರವೊಂದನ್ನು ಪೋಣಿಸಿ ಮರಕ್ಕೆ ಬಂಧಿಸಿದೆ. ದಿನನಿತ್ಯ ಅದರ ದ್ವಾರಬಾಗಿಲಿನಲ್ಲಿ ನುಲಿಯುವ ಜೇನುನೊಣಗಳು ಜೇಗುಡುವ ಶಬ್ದವನ್ನು ನಿರೀಕ್ಷಿಸುತ್ತಾ ಸುಮಾರು 20 ದಿನಗಳು ಕಾದೆ. ಒಂದೊಳ್ಳೆ ದಿನ ತೆರೆದ ಮಡಿಕೆಮನೆಗೆ ಜೇನುನೊಣಗಳು ಸಕುಟುಂಬ ಸಮೇತ ಆಗಮಿಸಿ, ನೆಲೆಸಿದವು. ಜೇನುನೊಣಗಳಿಂದ ಜೇನುತುಪ್ಪವನ್ನು ನಿರೀಕ್ಷಿಸದೇ ಕೇವಲ ಈ ಮುಗ್ಧಜೀವಿಗಳಿಗೆ ತಾತ್ಕಾಲಿಕ ಆಸರೆ ಒದಗಿಸುವ ಇಚ್ಛೆಯಿರುವವರು ಹೀಗೊಂದು ಮಡಿಕೆಯನ್ನು ಮನೆಯ ಬಳಿ ಕಟ್ಟಬಹುದು ಮತ್ತು ಇದಕ್ಕೆ ಪ್ರತಿಯಾಗಿ ನಿಮ್ಮ ಹಾಗೂ ಸುತ್ತಲಿನವರ ಕೈತೋಟದ ಇಳುವರಿ ಹೆಚ್ಚಾಗುವ ಹಾಗೂ ಇಳಿಸಂಜೆ ಗುಯ್ ಎನ್ನುವ ಪುಕ್ಕಟೆ ಸುಗಮ ಸಂಗೀತವನ್ನು ಬಾಡಿಗೆ ರೂಪದಲ್ಲಿ ಇವು ಕೊಡುತ್ತವೆ.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

